ಯೋಚಿಸುವುದು. ಸಾಯುವರೆಗೂ ಆ ಬಗ್ಗೆ ಯೋಚಿಸುತ್ತಲೇ ಇರುವುದು... ಹೊಳೆಯಿದಿದ್ದಾಗ, ಸುಮ್ಮನೆ ಸತ್ತು ಬಿಡುವುದು... ತೀರ್ಮಾನ ತಲುಪಿದೊಡನೆಯೇ ನನ್ನ ಬರಹ ಆರಂಭವಾಗಿಬಿಟ್ಟಿತು. ಇನ್ನು ಹತ್ತು ನಿಮಿಷ ಕಳೆದಿರಲಿಲ್ಲ. ಅಷ್ಟರಲ್ಲಿ ಬಾಗಿಲು ಬಡಿದ ಶಬ್ದ. ಕಟಕಟನೆ ಬಾಗಿಲು ಬಡಿಯುತ್ತ– 'ರೀ... ರೀ... ಏನ್ಮಾಡ್ತಾ ಇದೀರಿ ಅಲ್ಲಿ? ಬಾಗಿಲು ತೆಗೀರಿ' ಎಂಬ ಸುಶೀಲೆಯ ಕೂಗು... ನನಗೆ ತೀರಾ ಬೇಸರವಾಗಿ 'ಯಾಕೇ? ಸ್ವಲ್ಪ ಅಲ್ಲೇ ತೆಪ್ಪಗಿರ್ತಿಯಾ? ನಾನೇನೋ ಅರ್ಜೆಂಟಾಗಿ ಒಂದು ಪತ್ರ ಬರೀತಾ ಇದೀನಿ. ಗಲಾಟೆ ಮಾಡಬ್ಯಾಡಾ' ಎಂದು ಸಿಡುಕಿದರೂ ಸಹ ಹೊರಗಿನ ಬಾಗಿಲು ಶಬ್ದವಾಗುತ್ತಲೇ ಇದೆ.

'...ನಾನು ನಿನ್ನ ಮಾತಿನಂತೆ ದಿನಾಂಕ... ರಲ್ಲಿ ಊರಿನಿಂದ ಹೊರಟು ಡಾ|| ಸಿಂಗ್ ಅವರನ್ನು ಕಂಡು ನನ್ನ ದೇಹಸ್ಥಿತಿಯನ್ನು ಪರೀಕ್ಷಿಸಿಕೊಳ್ಳಬೇಕೆಂದೇ ನನ್ನ ಇಚ್ಛೆಯಾಗಿತ್ತು. ಬಸ್ಸಿನಲ್ಲಿ ನಾಲ್ಕು ಮೈಲಿ ಪ್ರಯಾಣ ಬಂದಾದನಂತರ ಅಲ್ಲಿ ನನ್ನ ಸ್ನೇಹಿತ ಗಣೇಶಯ್ಯನೂ ಅದೇ ಬಸ್ ಹತ್ತಿದ. ಅವನೂ ಸಹ ಡಾಕ್ಟರ್ ಸಿಂಗ್ ಅವರಿಗೆ...' ಬಾಗಿಲು ಬಡಿತ ಜೋರಾಗಿ ಕೇಳಿಸತೊಡಗಿತು. ನನ್ನ ಬರಹ ಸಾಗಲೇ ಇಲ್ಲವೆನ್ನಿಸತೊಡಗಿತು. ಗೆಳೆಯ ಗಣೇಶಯ್ಯನ ಜ್ಞಾಪಕವಾಯಿತು... ಅವನಿಗಾದರೂ ನನ್ನ ಸ್ಥಿತಿಯನ್ನು ತಿಳಿಸಿದ್ದರೆ... ಎನ್ನಿಸಿತು. ಎದ್ದು ಹೋಗಿ ಬಾಗಿಲು ತೆರೆದರೆ ಸುಶೀ ನಿಂತಿದ್ದಳು. ನಾನು ಅರ್ಧಂಬರ್ಧ ಬರೆದಿದ್ದ ಪತ್ರ ಮೇಜಿನ ಮೇಲೆ ಮಲಗಿತ್ತು. ಸುಶೀಲ ಅದನ್ನು ಕೈಗೆತ್ತಿಕೊಳ್ಳಬಹುದೆಂಬ ನನ್ನ ನಿರೀಕ್ಷೆ ನಿಜವಾಗಲಿಲ್ಲ. ಯಾಕೆ ಇವಳು ಈ ರೀತಿ ಬಾಗಿಲು ತೆಗೆಸಿದಳು? ನನ್ನ ಪತ್ರ ಮುಗಿಸುವುದು ಯಾವಾಗ? ನನ್ನ ಸಾವಿನ ಗಳಿಗೆ ಪ್ರತಿ ಕ್ಷಣವೂ ಹತ್ತಿರವಾಗುತ್ತಿದೆ... ಅಂದಹಾಗೇ ಡಾ|| ಸಿಂಗ್ ಅವರು ನಾನು ಸಾಯುವ ದಿನಾಂಕ, ಗಂಟೆ, ಗಳಿಗೆ ಎಂದು ವಿವರಗಳನ್ನೇನೂ ಹೇಳಿರಲಿಲ್ಲ. 'ನೀವು ಈ ಲೋಕದಲ್ಲಿ ಬಾಳುವುದು ಕೇವಲ ಎರಡು ತಿಂಗಳು' ಎಂದಷ್ಟೇ ಹೇಳಿದ್ದರು. ಎರಡು ತಿಂಗಳು ಎಂದರೆ ಕ್ಯಾಲೆಂಡರ್‌ನ ಎರಡು ತಿಂಗಳೇ? ಮೂವತ್ತು ದಿನಗಳ ಎರಡು ತಿಂಗಳೇ? ಅಥವಾ ನಿರ್ದಿಷ್ಟವಾಗಿ ಎರಡು ತಿಂಗಳಲ್ಲದೆ, ಹೆಚ್ಚು ಕಡಿಮೆ ಅಂದಾಜಿನ ಎರಡು ತಿಂಗಳೇ? ನಾನೇಕೆ ಹೀಗೆ ತಲೆ ಕೆಡಿಸಿಕೊಳ್ಳುತ್ತಿದ್ದೇನೆ? ಎರಡು ತಿಂಗಳಂತೂ ನಾಳೆಗೆ ಮುಗಿದು ಹೋಗುತ್ತವೆ. ನಾಳೆಯಿಂದ ಇನ್ನೊಂದೆರಡು ಮೂರು ದಿನಗಳಲ್ಲಿ ನನ್ನ ಅಂತ್ಯ ಖಂಡಿತ... ನಾನು ಸುಮ್ಮನೇ ಹೀಗೆ ಯೋಚಿಸುತ್ತಾ ನಿಂತ ರೀತಿಯನ್ನು ಕಂಡ ಸುಶೀ 'ರೀ... ಏನ್ರೀ ಹೀಗೆ ಒಂಥರಾ ಯೋಚ್ನೆ ಮಾಡ್ತಾ ನಿಂತುಬಿಟ್ರಿ? ಇಲ್ನೋಡಿ... ಅಲ್ಲಿ ಯಾರೋ ನಿಮ್ಮನ್ನ ಕೇಳ್ಕೊಂಡು ಹೊರಗೆ ನಿಂತಿದ್ದಾರೆ'– ಎಂದು ಎಚ್ಚರಿಸಿದಾಗಲೇ 'ಆಂ ಯಾರು?' ಎಂದು ಬೆಚ್ಚುತ್ತಾ ರೂಮಿನಿಂದ ಹೊರಬಾಗಿಲಿಗೆ ಬಂದೆ. ಬೀದಿಯಲ್ಲಿ ನಿಂತಿದ್ದವ ಬೇರೆ ಯಾರೂ ಆಗಿರದೆ ಗಣೇಶಯ್ಯನ ಹೆಂಡತಿಯ ಅಣ್ಣ ವಿಶ್ವನಾಥಯ್ಯ... 'ಓಹೋ... ಬನ್ನಿ ವಿಶ್ವಣ್ಣ... ಅಲ್ಲೇ ನಿಂತುಬಿಟ್ರಿ?' ಎಂದು ಸ್ವಾಗತಿಸಿದೆ. ವಿಶ್ವನಾಥಯ್ಯನ ಮುಖ ಕಂದಿ ಹೋಗಿತ್ತು. ಆತನ ಕಣ್ಣುಗಳೆಲ್ಲ ಊದಿದ್ದ ಹಾಗೆ ಕಂಡಿತು. ಕಣ್ಣಂಚಿನಲ್ಲಿ ಇನ್ನೂ ತೇವ ಕಾಣುತ್ತಿತ್ತು. ಗಾಬರಿಯಿಂದ ನಾನು ಆತನ ಸಮೀಪಕ್ಕೆ ಹೋಗಿ 'ಯಾಕೆ ಹೀಗಿದ್ದೀರಿ? ಏನ್ ಸಮಾಚಾರ? ಗಣೇಶಯ್ಯಾ' ಎನ್ನುತ್ತಿದ್ದ ಹಾಗೆ ಆತ ನನ್ನ ಎರಡೂ ಕೈ ಹಿಡಿದುಕೊಂಡು ಗೊಳೋ ಎಂದು ಅಳುತ್ತಾ 'ಹೋಗ್ಬಿಟ್ಟ ಸಾರ್... ನಮ್ಮ ಗಣೇಶ... ರಕ್ತ ಕಾರಿ ಕಾರಿ ಇವತ್ತು ಬೆಳಿಗ್ಗೆ ನಮ್ಮನ್ನೆಲ್ಲ ಬಿಟ್ಟು ಹೋಗ್ಬಿಟ್ಟ ಸಾರ್... ನಿಮ್ಮನ್ನ ಕರ್ಕೊಂಡ್ ಹೋಗಾಕೆ ಬಂದೆ...' ಎಂದ.

✤